ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಈ-ಮೇಲ್:dckodagu@mail.kar.nic.in
ವೆಬ್ ಸೈಟ್: http://www.kodagu.nic.in

ಸಂ:ಚುನಾ/10(3)/2016-17 ದಿನಾಂಕ:15-02-2017

# ಕರಡು ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ:ನಅಇ:04:ಎಂಎಲ್ಆರ್:2014 ದಿನಾಂಕ:15-02-2014ರ ಪತ್ರದಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿ 2018ಕ್ಕೆ ಅವಧಿ ಮುಕ್ತಾಯವಾಗಲಿರುವ ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳ ಪುನರ್ ವಿಂಗಡಣೆಯನ್ನು 2011ರ ಜನಗಣತಿಯನ್ವಯ ಮಾಡುವಂತೆ ಸರ್ಕಾರದ ಪತ್ರ ಸಂಖ್ಯೆ:ನಅಇ:12:ಎಂಎಲ್ಆರ್:2016 ದಿನಾಂಕ:18-01-2016ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ.

ಆದ್ದರಿಂದ ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಪ್ರಕರಣ 13 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ:104:ಟಿಎಂಎಸ್:2014 ದಿನಾಂಕ:09-01-2015 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿ ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ, ಐ.ಎ.ಎಸ್** ಆದ ನಾನು 2011ರ ಜನಗಣತಿಯನ್ವಯ ಕೊಡಗು ಜಿಲ್ಲೆಯ **ಸೋಮವಾರಪೇಟೆ ಪಟ್ಟಣ ಪಂಚಾಯಿತಿಯ** ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಿ ವಾರ್ಡ್‌ನ ಹೆಸರು ಮತ್ತು ಸಂಖ್ಯೆ ಹಾಗೂ ವಾರ್ಡ್‌ನ ವ್ಯಾಪ್ತಿಗೆ ಒಳಪಡುವ ಪ್ರದೇಶದ ಚೆಕ್ಕುಬಂದಿಯನ್ನು ವಿವರವಾಗಿ ಈ ಕೆಳಕಂಡಂತೆ ನಮೂದಿಸಿ **ಕರಡು ಅಧಿಸೂಚನೆ** ಹೊರಡಿಸಿರುತ್ತೇನೆ.

ಕರಡು ಅಧಿಸೂಚನೆಯಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳು **ದಿನಾಂಕ:06-03-2017 ರೊಳಗಾಗಿ ಲಿಖಿತ ಆಕ್ಷೇಪಣೆ ಹಾಗೂ ಸಲಹೆಗಳನ್ನು ಸಕಾರಣಗಳೊಂದಿಗೆ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ ಮಡಿಕೇರಿ** ಇವರಿಗೆ ಸಲ್ಲಿಸಬಹುದಾಗಿರುತ್ತದೆ.

1. ನಗರ ಸ್ಥಳೀಯ ಸಂಸ್ಥೆಯ ಹೆಸರು : **ಪಟ್ಟಣ ಪಂಚಾಯಿತಿ, ಸೋಮವಾರಪೇಟೆ.**
2. ವಾರ್ಡ್‌ಗಳ ಸಂಖ್ಯೆ : **11**

| ಕ್ರ. ಸಂ. | ವಾರ್ಡ್ ಹೆಸರು ಮತ್ತು ಸಂಖ್ಯೆ | ವಾರ್ಡ್‌ನ ಪ್ರದೇಶ ವ್ಯಾಪ್ತಿ (ಚೆಕ್ಕುಬಂದಿ) |
|---|---|---|
| (1) | (2) | (3) |
| 1 | **ಸೋಮವಾರಪೇಟೆ-1** (ಬಸವೇಶ್ವರ ರಸ್ತೆ) | ಪೂರ್ವಕ್ಕೆ:- ಚೌಡ್ಲು ಗ್ರಾಮ ಪಂಚಾಯಿತಿಯ ಗಡಿ ಭಾಗದಿಂದ ಮುಂದುವರೆದು ಕಿಬ್ಬೆಟ್ಟ ಗ್ರಾಮದ ಗಡಿಭಾಗದವರೆಗೆ ಮುಂದುವರೆಯುತ್ತದೆ.<br>ಪಶ್ಚಿಮಕ್ಕೆ:- 6ನೇ ವಾರ್ಡ್ ವಿಶ್ವೇಶ್ವರಯ್ಯ ರಸ್ತೆಯ ಮುಖಾಂತರವಾಗಿ ಚಲಿಸಿ ದೇವಸ್ಥಾನ ರಸ್ತೆಗೆ ಹೊಂದಿಕೊಂಡಂತೆ ಮುಂದುವರೆದು ಬಸವೇಶ್ವರ ರಸ್ತೆಯ ಮುಂಭಾಗದ ಮನೆಗಳು ಹಾಗೂ ಶಿವಾಜಿ ರಸ್ತೆಯ ಮುಂಭಾಗದ ಮನೆಗಳು ಸೇರಿ.<br>ಉತ್ತರಕ್ಕೆ:- ಡಾ॥ ಒ.ವಿ. ಕೃಷ್ಣಾನಂದರವರ ಮನೆಯಿಂದ ಪ್ರಾರಂಭಗೊಂಡು ಶಾಲಾ ರಸ್ತೆಗೆ ಹೋಗುವ ರಸ್ತೆಯ ಗಡಿ.<br>ದಕ್ಷಿಣಕ್ಕೆ:- ಎಸ್.ಜೆ.ಎಂ. ಶಾಲೆಗೆ ಕೊನೆಗೊಂಡು ಭಾಗಶ: ಬಸವೇಶ್ವರ ರಸ್ತೆಯ ಮನೆಗಳಿಗೆ ಹೊಂದಿಕೊಂಡಂತೆ. |

| (1) | (2) | (3) |
| --- | --- | --- |
| 2 | **ಸೋಮವಾರಪೇಟೆ–2** (ಬಾಣಾವಾರ ರಸ್ತೆ) | **ಪೂರ್ವಕ್ಕೆ:–** ಬಾಣಾವಾರ ರಸ್ತೆಯ ಕೊನೆಯಲ್ಲಿ ಬಿ–47ರ ಕಟ್ಟಡ ಹಾಗೂ ಮಸಗೋಡು ಗ್ರಾಮದ ಗಡಿಭಾಗ<br>**ಪಶ್ಚಿಮಕ್ಕೆ:–** ಎಸ್.ಜೆ.ಎಂ. ಶಾಲಾ ಗಡಿಭಾಗ ಹಾಗೂ ನಗರೂರು ಗ್ರಾಮಕ್ಕೆ ಹೊಂದಿಕೊಂಡಂತೆ ಗಡಿ ಭಾಗ.<br>**ಉತ್ತರಕ್ಕೆ:–** ಬಸವೇಶ್ವರ ರಸ್ತೆಯ ಭಾಗಶ: ಗಡಿ ಭಾಗದಿಂದ ಮುಂದುವರೆದು ಕಟ್ಟಡ ಸಂಖ್ಯೆ ಎ–116ರ ಗಡಿ.<br>**ದಕ್ಷಿಣಕ್ಕೆ:–** ಬಾಣಾವಾರ ರಸ್ತೆಯ ಬಸ್ ನಿಲ್ದಾಣದಿಂದ ಮುಂದುವರೆದು ಸುಂದರ ರವರ ಖಾಲಿ ನಿವೇಶನ ಜಾಗವಾಗಿ ಚಿಲುಮೆ ಎಸ್ಟೇಟ್ ಕೊನೆಯ ಭಾಗದ ವರೆಗೆ ಮುಂದುವರೆಯಲಿದೆ. |
| 3 | **ಸೋಮವಾರಪೇಟೆ–3** (ವೆಂಕಟೇಶ್ವರ ಬ್ಲಾಕ್) | **ಪೂರ್ವಕ್ಕೆ:–** ಮಸಗೋಡು ಗ್ರಾಮಕ್ಕೆ ಸೇರಿದ ಕಾಫಿ ತೋಟವಾಗಿ ಮುಂದುವರೆಯುತ್ತದೆ.<br>**ಪಶ್ಚಿಮಕ್ಕೆ:–** ನಗರೂರು ಗ್ರಾಮದ ಗಡಿಭಾಗವಾಗಿದ್ದು ಪಟ್ಟಣ ಪಂಚಾಯಿತಿ ವ್ಯಾಪ್ತಿಯು ಕೂಡ ಆಗಿರುತ್ತದೆ.<br>**ಉತ್ತರಕ್ಕೆ:–** ಸೋಮವಾರಪೇಟೆ ಬಸವೇಶ್ವರ ರಸ್ತೆ ಭಾಗಶ: ಹಾಗೂ ಎಸ್.ಜೆ.ಎಂ ಶಾಲೆಯಿಂದ ಪ್ರಾರಂಭವಾಗಿ ಬೇಳೂರು ರಸ್ತೆಗೆ ಹೊಂದಿಕೊಂಡಂತೆ<br>**ದಕ್ಷಿಣಕ್ಕೆ:–** ವಲ್ಲಭಾಯಿ ರಸ್ತೆಯ ಗಡಿಭಾಗವಾಗಿ ಮುಂದುವರೆದು ಬೇಳೂರು ಪಂಚಾಯಿತಿಗೆ ಸೇರಿದ ನೇರುಗಳಲೆ ಗ್ರಾಮದ ಗಡಿಗೆ ಸೇರುತ್ತದೆ. |
| 4 | **ಸೋಮವಾರಪೇಟೆ–4** (ರೇಂಜರ್ ಬ್ಲಾಕ್ 1ನೇ ಹಂತ) | **ಪೂರ್ವಕ್ಕೆ:–** ಪವರ್ ಹೌಸ್ ರಸ್ತೆಗಾಗಿ ಮುಂದುವರೆದು ಕೆ.ಇ.ಬಿ. ಗೆ ಹೋಗುವ ರಸ್ತೆಗಾಗಿ ಮುಂದುವರೆಯುತ್ತದೆ. ಹಾಗೂ ಸದರಿ 2 ಮತ್ತು 3ರ ವಾರ್ಡ್‌ಗಳ ಗಡಿಭಾಗಗಳನ್ನು ಸೇರಿಕೊಳ್ಳುತ್ತದೆ.<br>**ಪಶ್ಚಿಮಕ್ಕೆ:–** ಸೋಮವಾರಪೇಟೆ ರೇಂಜರ್ ಬ್ಲಾಕ್ ಮಸೀದಿಗಾಗಿ ಮುಂದುವರೆದು ಅರಣ್ಯ ಇಲಾಖೆಗೆ ಹೊಂದಿಕೊಂಡಂತೆ ಮುಂದುವರೆದು ರೇಂಜರ್ ಬ್ಲಾಕ್ 9ನೇ ವಾರ್ಡಿಗೆ ಹೊಂದಿಕೊಂಡಂತೆ.<br>**ಉತ್ತರಕ್ಕೆ:–** ವಾರ್ಡ್ ನಂ. 2ರ ಗಡಿಬಾಗ ಸರ್ಕಾರಿ ಆಸ್ಪತ್ರೆಯಿಂದ ಮುಂದುವರೆದು ಮಹಿಳಾ ಸಮಾಜ ರಸ್ತೆಗಾಗಿ ಚಲಿಸಿ ರಾಮಮಂದಿರ ರಸ್ತೆಯ ಗಡಿಬಾಗದ ವರೆಗೂ.<br>**ದಕ್ಷಿಣಕ್ಕೆ:–** ನಗರೂರು ಗ್ರಾಮದ ಸ.ನಂ. 91 ಮತ್ತು 89ರ ಗದ್ದೆ ಭಾಗದಿಂದ ಮುಂದುವರೆದು ಪಟ್ಟಣ ಪಂಚಾಯಿತಿ ಎಲ್ಲೆಯ ಗಡಿಭಾಗದ ವರೆಗೂ |
| 5 | **ಸೋಮವಾರಪೇಟೆ–5** (ದೇವಸ್ಥಾನ ರಸ್ತೆ) | **ಪೂರ್ವಕ್ಕೆ:–** ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ದೇವಸ್ಥಾನ ರಸ್ತೆಗಾಗಿ ಪ್ರಾರಂಭಗೊಂಡು ಬ್ಲಾನ್ ಕಾಫಿಗಾಗಿ ಅಶೋಕ ರಸ್ತೆಗೆ ಹೊಂದಿಕೊಂಡಂತೆ ಪ್ರಾರಂಭಗೊಳ್ಳುತ್ತದೆ.<br>**ಪಶ್ಚಿಮಕ್ಕೆ:–** ಪಟ್ಟಣ ಪಂಚಾಯಿತಿಯ ಆಸ್ಪತ್ರೆ ಮುಂಭಾಗದಿಂದ ಕೆಳಭಾಗವಾಗಿ ಚಲಿಸಿ ಗಣಪತಿ ದೇವಸ್ಥಾನದ ಮುಂಭಾಗದಿಂದ ತ್ಯಾಗರಾಜ ರಸ್ತೆಗೆ ಹೊಂದಿಕೊಂಡಂತೆ ಕೊನೆಗೊಳ್ಳುತ್ತದೆ.<br>**ಉತ್ತರಕ್ಕೆ:–** ಸ್ಟೇಟ್ ಬ್ಯಾಂಕ್ ರಸ್ತೆಗೆ ಹೊಂದಿಕೊಂಡಂತೆ ಪ್ರಾರಂಭವಾಗಿ ದೇವಸ್ಥಾನ ರಸ್ತೆಯ ಮುಂಭಾಗದ ಮನೆಗಳು ಸೇರಿಕೊಂಡು ಗಡಿ ಪ್ರಾರಂಭವಾಗುತ್ತದೆ.<br>**ದಕ್ಷಿಣಕ್ಕೆ:–** ಅಶೋಕ ರಸ್ತೆಯಿಂದ ಪ್ರಾರಂಭವಾಗಿ ರಾಮಮಂದಿರ ರಸ್ತೆಯಿಂದ ಮಹಿಳಾ ಸಮಾಜರಸ್ತೆಗಾಗಿ ಚಲಿಸಿ ಆಸ್ಪತ್ರೆರಸ್ತೆಗೆ ಕೊನೆಗೊಳ್ಳುತ್ತದೆ. |
| 6 | **ಸೋಮವಾರಪೇಟೆ–6** (ವಿಶ್ವೇಶ್ವರಯ್ಯ ಬ್ಲಾಕ್) | **ಪೂರ್ವಕ್ಕೆ:–** ವಿಶ್ವೇಶ್ವರಯ್ಯ ರಸ್ತೆ ಮುಂಭಾಗದ ಮನೆಗಳಿಂದ ಪ್ರಾರಂಭಗೊಂಡು ಶಾಲಾ ರಸ್ತೆ, ಕಿಬ್ಬೆಟ್ಟ ಗ್ರಾಮದ ಗಡಿಭಾಗದ ವರೆಗೆ.<br>**ಪಶ್ಚಿಮಕ್ಕೆ:–** ಸ್ಟೇಟ್ ಬ್ಯಾಂಕ್ ರಸ್ತೆಯಿಂದ ಮುಂದುವರೆದು ಶಾಲಾ ರಸ್ತೆಗಾಗಿ ಚಲಿಸಿ ಶತಮಾನೋತ್ಸವ ಭವನದ ವರೆಗೆ ಮುಂದುವರೆಯುತ್ತದೆ.<br>**ಉತ್ತರಕ್ಕೆ:–** ಪಟ್ಟಣ ಪಂಚಾಯಿತಿ ನೇತಾಜಿ ಪಾರ್ಕ್ ಆನೆಕೆರೆ ಮುಂಭಾಗದಿಂದ ಶಾಲಾ ರಸ್ತೆ ಕೊನೆಯವರೆಗೂ ಮುಂದುವರೆಯುತ್ತದೆ.<br>**ದಕ್ಷಿಣಕ್ಕೆ:–** ವಿಶ್ವೇಶ್ವರಯ್ಯ ರಸ್ತೆಯಿಂದ ಎಂ.ಜಿ. ರಸ್ತೆಯ ಮುಂಭಾಗದ ಮನೆಗಳಿಂದ ಚಲಿಸಿ ಮಡಿಕೇರಿ ರಸ್ತೆವರೆಗೆ ಕೊನೆಗೊಳ್ಳುತ್ತದೆ. |

| (1) | (2) | (3) |
|---|---|---|
| 7 | **ಸೋಮವಾರಪೇಟೆ–7** (ರೇಂಜರ್ ಬ್ಲಾಕ್ 2ನೇ ಹಂತ) | ಪೂರ್ವಕ್ಕೆ:– ಸೋಮವಾರಪೇಟೆ ಲೋಡರ್ಸ್ ಕಾಲೋನಿ ರಸ್ತೆಗಾಗಿ ಮುಂದುವರೆದು ಅರಣ್ಯ ಇಲಾಖೆ ಮುಂಭಾಗದ ರಸ್ತೆಗಾಗಿ ವಾರ್ಡ್ ನಂ. 8ಕ್ಕೆ ಸೇರುವ ರಸ್ತೆಯ ಗಡಿಭಾಗದ ವರೆಗೆ.<br>ಪಶ್ಚಿಮಕ್ಕೆ:– ಮಹದೇಶ್ವರ ಬ್ಲಾಕ್ ರಸ್ತೆ ಕೊನೆಯಿಂದ ಸಣ್ಣಮ್ಮನವರ ಮನೆ ಮುಂಭಾಗದ ರಸ್ತೆ ಹಾಗೂ ವಾರ್ಡ್ ನಂ. 8 ಜನತಾಕಾಲೋನಿ ಪ್ರಾರಂಭಗೊಳ್ಳುವ ಗಡಿ ಭಾಗದ ವರೆಗೆ.<br>ಉತ್ತರಕ್ಕೆ:– ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ತಾಲೂಕು ಕಛೇರಿಯಿಂದ ಪ್ರಾರಂಭಗೊಂಡು ಪೋಲೀಸ್ ಕಛೇರಿ ಹಾಗೂ ವಸತಿಗೃಹಗಳು ಸೇರಿಕೊಂಡಂತೆ ಪ್ರಾರಂಭವಾಗಿ ಮುಂದುವರೆದು ವಾರ್ಡ್‌ನಂ. 8ರ ಗಡಿಗೆ ಮುಕ್ತಾಯವಾಗುತ್ತದೆ.<br>ದಕ್ಷಿಣಕ್ಕೆ:– ರೇಂಜರ್ ಬ್ಲಾಕ್ ರಸ್ತೆಗೆ ಹೊಂದಿಕೊಂಡಂತೆ ಪ್ರಾರಂಭವಾಗಿ ವಾರ್ಡ್ ನಂ. 8ರ ಜನತಾಕಾಲೋನಿಗೆ ಹೋಗುವ ರಸ್ತೆಗಾಗಿ ಮುಂದುವರೆದು ನಗರೂರು ಗ್ರಾಮದ ಗಡಿ ಭಾಗದ ವರೆಗೆ ಮುಕ್ತಾಯವಾಗುತ್ತದೆ. |
| 8 | **ಸೋಮವಾರಪೇಟೆ–8** (ಜನತಾ ಕಾಲೋನಿ) | ಪೂರ್ವಕ್ಕೆ:– ರೇಂಜರ್ ಬ್ಲಾಕ್ 07ನೇ ವಾರ್ಡ್ ಗಡಿಬಾಗದಿಂದ ಪ್ರಾರಂಭಗೊಂಡು 7ನೇ ವಾರ್ಡ್ ಮುಕ್ತಾಯದ ವರೆಗೆ ಮುಂದುವರೆಯುತ್ತದೆ.<br>ಪಶ್ಚಿಮಕ್ಕೆ:– ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹದೇಶ್ವರ ಬ್ಲಾಕ್ 10ನೇ ವಾರ್ಡ್ ಗಡಿ ಬಾಗದ ವರೆಗೆ ಮುಂದುವರೆದು ನಗರೂರು ಗ್ರಾಮದ (ಬೇಳೂರು ಗ್ರಾಮ ಪಂಚಾಯಿತಿ ಗ್ರಾಮದ ಗಡಿಭಾಗದವರೆಗೂ ಮುಂದುವರೆಯುತ್ತದೆ.<br>ಉತ್ತರಕ್ಕೆ:– ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮಹದೇಶ್ವರ ಬ್ಲಾಕ್ ರಸ್ತೆಯ ಗಡಿಬಾಗ ಹಾಗು ರೇಂಜರ್ ಬ್ಲಾಕ್‌ಗೆ ಹೊಂದಿಕೊಂಡಂತೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ:– ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಗಡಿಬಾಗವಾಗಿದ್ದು ಸದರಿ ನಗರೂರು ಗ್ರಾಮ (ಬೇಳೂರು ಗ್ರಾಮ ಪಂಚಾಯಿತಿ ಗಡಿ ಭಾಗ ಪೂರ್ಣವಾಗಿ ಸುತ್ತುವರೆದಿರುತ್ತದೆ. |
| 9 | **ಸೋಮವಾರಪೇಟೆ–9** (ಸಿದ್ದಲಿಂಗೇಶ್ವರ ಬ್ಲಾಕ್) | ಪೂರ್ವಕ್ಕೆ:– ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರೇಂಜರ್ ಬ್ಲಾಕಿನಲ್ಲಿ ಸಣ್ಣಮ್ಮ ನವರ ಮನೆಯಿಂದ ಪ್ರಾರಂಭಗೊಂಡು ಬಿ.ಟಿ. ಶಿವರಾಜುರವರ ವಾಸದ ಮನೆಗಾಗಿ ಮುಂದುವರೆದು ಪೋಲೀಸ್ ವಸತಿ ಗೃಹದ ಬಳಿ ಕೊನೆಗೊಳ್ಳುತ್ತದೆ.<br>ಪಶ್ಚಿಮಕ್ಕೆ:– ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಎಂ.ಡಿ. ಬ್ಲಾಕ್ ಎರಡನೇ ಹಂತದ ಗಡಿ ಬಾಗದಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಚಲಿಸಿ ನಗರೂರು ಗ್ರಾಮದ ಗಡಿ ಬಾಗಕ್ಕೆ ಹೊಂದಿಕೊಂಡಂತೆ ತಲುಪುತ್ತದೆ.<br>ಉತ್ತರಕ್ಕೆ:– ಶ್ರೀ ಆರ್.ಸಿ. ವಿಜಯರವರ ಮನೆಗಾಗಿ ಪೂರ್ವದ ದಿಕ್ಕಿಗಾಗಿ ಮುಂದುವರೆದು ಪಟ್ಟಣ ಪಂಚಾಯಿತಿ ಗ್ರಂಥಾಲಯ ಕಟ್ಟಡದ ವರೆಗೆ ತಲುಪಿ ಸಹಕಾರ ಭವನದ ಕಟ್ಟಡಕ್ಕೆ ಕೊನೆಗೊಳ್ಳುತ್ತದೆ.<br>ದಕ್ಷಿಣಕ್ಕೆ:– ಸದರಿ ಪಟ್ಟಣ ಪಂಚಾಯಿತಿ ವ್ಯಾಪ್ತಿ ಶನಿದೇವರ ದೇವಸ್ಥಾನದಿಂದ ಪ್ರಾರಂಭಗೊಂಡು ಸದರಿ ಎಂ.ಡಿ. ಬ್ಲಾಕ್ ರಸ್ತೆಗಾಗಿ ಮುಂದುವರೆದು ಜನತಾಕಾಲೋನಿ ಗಡಿ ಹಾದು ರೇಂಜರ್ ಬ್ಲಾಕ್ ಗಡಿಗಾಗಿ ಕೊನೆಗೊಳ್ಳುತ್ತದೆ. |

| (1) | (2) | (3) |
|---|---|---|
| 10 | **ಸೋಮವಾರಪೇಟೆ–10** (ಮಹದೇಶ್ವರ ಬ್ಲಾಕ್) | **ಪೂರ್ವಕ್ಕೆ:–** ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವಾರ್ಡ್ ನಂ. 8ರ ಗಡಿಭಾಗದಿಂದ ಪ್ರಾರಂಭಗೊಂಡು ನಗರೂರು ಗ್ರಾಮಕ್ಕೆ ಸೇರಿದ ಗಡಿಬಾಗಕ್ಕೆ ಹೊಂದಿಕೊಂಡಂತೆ ಕೊನೆಗೊಳ್ಳುತ್ತದೆ.<br>**ಪಶ್ಚಿಮಕ್ಕೆ:–** ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಕಕ್ಕೆಹೊಳೆ ಗಡಿಬಾಗದಿಂದ ಮುಂದುವರೆದು ಬಿ.ಎಂ. ದಿನೇಶರವರ ವಾಸದ ಮನೆವರೆಗೆ ಮುಂದುವರೆಯುತ್ತದೆ.<br>**ಉತ್ತರಕ್ಕೆ:–** ಪಟ್ಟಣ ವ್ಯಾಪ್ತಿಯಲ್ಲಿ ಎಲ್.ಐ.ಸಿ ಕಛೇರಿ ಹಿಂಭಾಗವಾಗಿ ಹಾದು ಕೊಡವ ಸಮಾಜದ ಹಿಂಭಾಗದಿಂದ ಮಹದೇಶ್ವರ ಬ್ಲಾಕ್ ರಸ್ತೆಗೆ ಹೊಂದಿಕೊಂಡಂತೆ.<br>**ದಕ್ಷಿಣಕ್ಕೆ:–** ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಗಡಿಬಾಗ ಸ.ನಂ. 64/1 ಮತ್ತು 64/2, ಮುಂದುವರೆದು ನಗರೂರು ಸ.ನಂ. 60/2, 57ಕ್ಕೆ ಸೇರಿಕೊಂಡಂತೆ. |
| 11 | **ಸೋಮವಾರಪೇಟೆ–11** (ಸಿ.ಕೆ.ಸುಬ್ಬಯ್ಯ ರಸ್ತೆ) | **ಪೂರ್ವಕ್ಕೆ:–** ವಾರ್ಡ್ ನಂ. 05ರ ಆಸ್ಪತ್ರೆ ರಸ್ತೆಯಿಂದ ಪ್ರಾರಂಭಗೊಂಡು ತ್ಯಾಗರಾಜ ರಸ್ತೆ ಮುಖಾಂತರವಾಗಿ ಖಾಸಗಿ ಬಸ್ ನಿಲ್ದಾಣ ಮುಖಾಂತರ ಹಾದು ಸರ್ಕಾರಿ ಆಸ್ಪತ್ರೆ ಮುಂಭಾಗದಿಂದ ಪ್ರಾರಂಭಗೊಂಡಿರುತ್ತದೆ.<br>**ಪಶ್ಚಿಮಕ್ಕೆ:–** ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಕಮಾನು ಮಡಿಕೇರಿ ರಸ್ತೆಯಿಂದ ಮುಂದುವರೆದು ಸಫಾಲಿ ಬಾರ್ ರಸ್ತೆಯ ಮುಖಾಂತರ ಮಾನಸಹಾಲ್ ರಸ್ತೆಗೆ ಹೋಗುವ ದಾರಿಗಾಗಿ ಮುಂದುವರೆಯುತ್ತದೆ.<br>**ಉತ್ತರಕ್ಕೆ:–** ಪೌರಕಾರ್ಮಿಕರ ಕಾಲೋನಿಯಿಂದ ಮುಂದುವರೆದು ಲೋಡರ್ಸ್ ಕಾಲೋನಿ ರಸ್ತೆಗಾಗಿ ಎಂ.ಜಿ. ರಸ್ತೆ ಕೊನೆಯವರೆಗೆ ಮುಂದುವರೆಯುತ್ತದೆ.<br>**ದಕ್ಷಿಣಕ್ಕೆ:–** ಹಳೆಯ ಪೋಲೀಸ್ ಕಛೇರಿಯಿಂದ ಪ್ರಾರಂಭಗೊಂಡು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮುಂಭಾಗದಿಂದ ಕ್ಲಬ್ ರಸ್ತೆ ಹಿಂಭಾಗದ ಮನೆಗಳನ್ನು ಸೇರಿಕೊಂಡಂತೆ ಪಟ್ಟಣ ಪಂಚಾಯಿತಿ ಕುರಿದೊಡ್ಡಿಗಾಗಿ ಚಲಿಸಿ ಕೆಳಗೆ ಕಕ್ಕೆಹೊಳೆಗೆ ಕೊನೆಗೊಳ್ಳುತ್ತದೆ. |

125

**ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ, ಐ.ಎ.ಎಸ್**
ಜಿಲ್ಲಾಧಿಕಾರಿ
ಕೊಡಗು ಜಿಲ್ಲೆ, ಮಡಿಕೇರಿ.